ಹೆಂಗಸು ಪಾರ್ವತಿ ಒಂದು ಟ್ರೇನಲ್ಲಿ ಮಿಠಾಯಿ ತುಂಬಿದ ಪ್ಲೇಟನ್ನೂ, ತಂಪು ಪಾನೀಯ 'ರಸನಾ' ತುಂಬಿದ 3 ಗ್ಲಾಸುಗಳನ್ನೂ ಹೊತ್ತು ಬಂದಳು. ಪ್ಲೇಟು ಗ್ಲಾಸುಗಳನ್ನು ಟೀಪಾಯಿ ಮೇಲಿರಿಸಿ, ರಾವ್‌ಜೀಭಾಯಿಯನ್ನೊಮ್ಮೆ ಚೆನ್ನಾಗಿ ನೋಡಿಕೊಂಡು ಖಾಲಿ ಮಾಡಿದ ಟ್ರೇದ ಜೊತೆಗೆ ಅಡಿಗೆಮನೆಯ ಕಡೆಗೆ ಸಾಗುತ್ತಿರುವಾಗ ಧೋಂಡೂ ನೀರು ತುಂಬಿದ ಗ್ಲಾಸೊಂದನ್ನು ಬಳಿಯಲ್ಲಿ ಹಿಡಿದು ತಂದ. ಹೊರಗೆ ಬರಲು ಒಂದು ನೆಪ ಬೇಕಾಗಿತ್ತು ಎನ್ನುವ ಹಾಗೆ, 'ಗಂಡ ಹೆಂಡಿರೇನೋ' ಎಂಬ ವಿಚಾರ ರಾವ್‌ಜೀಬಾಯಿಯ ಮನಸ್ಸಿನಲ್ಲಿ ಸುಳಿಯುವ ಹೊತ್ತಿಗೇ ಫ್ರೇನಿ– 'ನಮ್ಮ ಧೋಂಡೂ ಪಾರ್ವತಿ ಗಂಡ ಹೆಂಡಿರು' ಎಂದಳು. ರಾವ್‌ಜೀಭಾಯಿ ಮುಗುಳ್ನಕ್ಕ. ಯಾರೂ ಬಯಸದೆಯೂ ನೆಲಸಹತ್ತಿದ ಮೌನ ಮುರಿದ ಖುಶಿಯಲ್ಲಿ ಜಮಶೇದ, 'ತೀರ ಸಣ್ಣವರಿದ್ದಾಗಲೇ ನಮ್ಮ ಮನೆಗೆ ಬಂದರು. ದಿಕ್ಕಿಲ್ಲದ ತಬ್ಬಲಿಗಳಾಗಿ ಇಲ್ಲೇ ಬೆಳೆದು ದೊಡ್ಡವರಾದ ಮೇಲೆ ನಾವೇ ಮದುವೆ ಮಾಡಿಸಿದೆವು' ಎಂದ. 'ಭೇಷ್' ಎನ್ನಬೇಕು ಎನ್ನುವಷ್ಟು ಪುಲಕಿತನಾದ ಇದನ್ನು ಕೇಳಿದ ರಾವ್‌ಜೀಭಾಯಿ ಆಗ. ಧೋಂಡೂ ಹೇಳಿದ, 'ಆ ಹುಡುಗನನ್ನು ನಾನು ಬಲ್ಲೆ'. ಧೋಂಡೂ, ಮಧ್ಯಾಹ್ನ ರಾವ್‌ಜೀಭಾಯಿಗೆ ತಪ್ಪುಗಂಟಾದ ಹುಡುಗನ ಬಗ್ಗೆ ಹೇಳುತ್ತಿದ್ದಾನೆ ಎಂದು ಎಲ್ಲರಿಗೂ ಗೊತ್ತಾಯಿತು. 'ಅಂದರೆ ಅವನು ಕೇಳಿದ್ದು ನನ್ನ ಬಗ್ಗೆ ಅಲ್ಲವೆನ್ನುತ್ತೀಯಾ?' ಎಂದು ಕೇಳುವವನ ಹಾಗೆ ಧೋಂಡೂನ ಕಡೆಗೆ ನೋಡತೊಡಗಿದ ರಾವ್‌ಜೀಭಾಯಿ ನೀರಡಿಸಿ ನೀರಿನ ಗ್ಲಾಸಿಗೆ ಕೈ ಹಾಕಿದ.

'ಈ ಮೊದಲೂ ಆ ಹುಡುಗನನ್ನು ನಾನು ಪಾರ್ವತಿ ಇಬ್ಬರೂ ನೋಡಿದ್ದೇವೆ. ಇಲ್ಲಿಂದಲೇ. ಈ ಮುಂದಿನ ಬಾಲ್ಕನಿಯಿಂದ ಈಗ ಪಾರ್ವತಿಯೇ ನೆನಪು ಮಾಡಿಕೊಟ್ಟಳು. ಕಳೆದ ನಾಲ್ಕು ದಿನಗಳಿಂದ ದಿನವೂ ಬರುತ್ತಾನೆ. ಝೋಪಡಪಟ್ಟಿಯವನಿರಬೇಕು.' ತಾನು ಯಾವ ಅರ್ಥದಲ್ಲಿ ಅವನನ್ನು ಬಲ್ಲೆನೆಂದಿದ್ದೆ ಎಂಬುದನ್ನು ಸ್ಪಷ್ಟಪಡಿಸಿದ ಧೋಂಡೂ ಕೈಯಲ್ಲಿ ಹಿಡಿದ ಬಶಿಯೊಂದಿಗೆ ಒಳಗೆ ನಡೆದ.

ರಾವ್‌ಜೀಭಾಯಿ ಇಂಥದ್ದಕ್ಕೇ ಕಾದು ಕೂತ ಹಾಗಿತ್ತು. ಸರಕ್ಕನೆ, ಒಳಗಿನದೇನೋ ತಂತಾನೆ ಈವರೆಗೂ ಧರಿಸಿರದ ಹೊಸತೇ ಒಂದು ಆಕಾರ ಧರಿಸುತ್ತ ಮಾತಾಡಲು ಹವಣಿಸುತ್ತಿರುವ ಅರಿವು ಬಂದು, 'ಮಿಠಾಯಿಗಾಗಿ ಇನ್ನೊಮ್ಮೆ ಬರುತ್ತೇನೆ. ಈ ವಯಸ್ಸಿನಲ್ಲಿ ಪಚನಶಕ್ತಿ ಅಷ್ಟಕ್ಕಷ್ಟೇ. ಸದ್ಯ ಇದು ಸಾಕು' ಎಂದು ರಸನಾದ ಗ್ಲಾಸನ್ನು ಕೈಗೆತ್ತಿಕೊಂಡು, ಒಂದೇ ಗುಟುಕಿಗೆ ಎಂಬಂತೆ ಕುಡಿದು ಮುಗಿಸಿ ಗ್ಲಾಸನ್ನು ಕೆಳಗಿಟ್ಟ. ಆಡಬೇಕೆಂದುಕೊಂಡಿದ್ದ ಮಾತು ಕೂಡಲೇ ಯಾರಿಗೂ ಅರ್ಥವಾಗದ ಒಂದು ಪ್ರಶ್ನೆಯಾಗಿ ಆರಂಭವಾಯಿತು. ಆ ಪ್ರಶ್ನೆಗೆ ತಾನೇ ಕಂಡುಕೊಂಡ ಉತ್ತರವೋ ಎನ್ನುವ ಹಾಗೆ ಮುಂದೆ ಕುಳಿತವರನ್ನು ಮಂತ್ರಮುಗ್ಧಗೊಳಿಸುತ್ತ ಒಂದೇ ಹೊತ್ತಿಗೆ ಹಲವು ಕಾಲದೇಶಗಳನ್ನು ಸುತ್ತಾಡಿ ಮತ್ತೆ ವರ್ತಮಾನಕ್ಕೆ ಜಮಶೇದಜೀ ದಾರೂವಾಲಾನ ಎಂಟನೇ ಮಜಲೆಯ ದಿವಾಣಖಾನೆಗೆ ಬರುತ್ತಿರುವಾಗ ಕತೆಯನ್ನು ಕೇಳಿದವರಿಗೆ, ಹೇಳಿದವನಿಗೆ ಹೊತ್ತಿನ ಅರಿವೇ ಇರಲಿಲ್ಲ. ರಾವ್‌ಜೀಭಾಯಿಗಂತೂ ತಾನು ಈ ಕತೆಯನ್ನು ಹೇಳುತ್ತಿರಲಿಲ್ಲ. ಯಾರೋ ಹೇಳಿದ್ದನ್ನು ತಾನೂ ಕೇಳುತ್ತಿದ್ದೆ ಎಂಬಂಥ ಭಾವನೆಯಿಂದ ಕೂಡಲೇ ಬಿಡಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಧೋಂಡೂ ಹಾಗೂ ಪಾರ್ವತಿ ಕೂಡ ಕತೆ ಕೇಳುವವರಲ್ಲಿ ಸಾಮೀಲಾಗಿದ್ದರು ಎಂಬುದು ಲಕ್ಷ್ಯಕ್ಕೆ ಬಂದದ್ದು ಧೋಂಡೂ ಎದ್ದು ಬಾಲ್ಕನಿಯ ಪರದೆಗಳನ್ನು ಬದಿಗೆ ಸರಿಸಿ ಪಶ್ಚಿಮದ ಕಡೆಯ ಬೆಳಕನ್ನು ಒಳಗೆ ಬರುವಂತೆ ಮಾಡಿದಾಗ; ಪಾರ್ವತಿ ಟೀಪಾಯಿಯ ಮೇಲಿನ ಪ್ಲೇಟು ಗ್ಲಾಸುಗಳನ್ನೆತ್ತಿಕೊಂಡು